## ಅಮೂಲ್ಯ ಕಾಣೆಯಾಗಿದ್ದಾಳೆ..!

ಅಮೃತ ವರ್ಷಿಣಿ ಧಾರಾವಾಹಿಯಲ್ಲಿ ಇಬ್ಬರು ವಿಜಯ್‌ಗಳ ಜಟಾಪಟಿ ಹಾಸ್ಯಾಸ್ಪದವೆನ್ನಿಸುತ್ತಿದೆ. ಅಮೂಲ್ಯ ಮೂರು ತಿಂಗಳಿನಿಂದ ಕಾಣುತ್ತಿಲ್ಲ. ಅಮೂಲ್ಯಳ ಹಾಗೂ ಅವರಿಬ್ಬರ ಡಿ.ಎನ್.ಎ. ಟೆಸ್ಟ್ ಮಾಡಿಸಬೇಕೆಂಬ ಸಾಮಾನ್ಯ ಪ್ರಜ್ಞೆ ಕೂಡ ಕುಟುಂಬದವರಿಗೆ ಮತ್ತು ವಕೀಲರಿಗೆ ಹೊಳೆಯಲಿಲ್ಲವೆ? ನಿಜವಾದ ವಿಜಯ್‌ನನ್ನು ಗುರುತಿಸುವುದು ನಿರ್ದೇಶಕರಿಗೆ ಬೇಡವಾಗಿದೆಯೆ?

—ನಂದಾದೀಪ ಕಳಸಾಪುರ, ಚಿಕ್ಕಮಗಳೂರು

## ಹುಚ್ಚ ರಾಟ

ಇತ್ತೀಚೆಗೆ ಕಲರ್ಸ್ ಕನ್ನಡದ ಧಾರಾವಾಹಿಗಳು ಹಾಗೂ 'ರಿಯಾಲಿಟಿ ಶೋ'ಗಳ ಟಿಆರ್‌ಪಿ ಹೆಚ್ಚಿಸುವ ಮಾನದಂಡ ಯಾವುದು ಗೊತ್ತೇ? ಮಕ್ಕಳು, ಹಾವು, ದೆವ್ವ–ಭೂತ, ಸ್ವಾಮೀಜಿಗಳು, ಕಣಿ ಹೇಳುವವರು, ಹುಚ್ಚರು.. ಸುದೀಪ್‌ರಂತಹ ಸ್ಟಾರ್ ನಟ ಟಿಆರ್‌ಪಿ ಹೆಚ್ಚಿಸುವುದಕ್ಕಿಂತ ಪ್ರಥಮ್ ಟಿಆರ್‌ಪಿ ಹೆಚ್ಚಿಸುತ್ತಾರೇನೊ? ಅದಕ್ಕೇ ಆತ ಇನ್ನೂ ಬಿಗ್‌ಬಾಸ್ ಮನೆಯಲ್ಲಿರಬಹುದು. ಜೊತೆಗೆ ಅವರ ಹುಚ್ಚಾಟಗಳನ್ನು ಎಪಿಸೋಡ್ ಮಾದರಿಯಲ್ಲಿ ವೀಕ್ಷಕರಿಗೆ ಉಣಬಡಿಸುತ್ತಿದ್ದಾರೆ.

—ಕು.ನ. ಗೋಪಿನಾಥ್, ಚಾಮರಾಜನಗರ

## ಬಿಗ್–ಬಾಸ್

'ಬಿಗ್ ಬಾಸ್'ನ ಹಲವು ಘಟನೆಗಳು ಇದು ನಾಟಕೀಯ ಅಥವಾ ಪೂರ್ವ ನಿರ್ಧಾರಿತ ಶೋ ಎನ್ನುವಂತೆ ಮಾಡುತ್ತಿವೆ.

1. ವೆಂಕಟ್‌ರನ್ನು ಅಂಗರಕ್ಷಕರೊಂದಿಗೆ ಕಳಿಸಿ, 'ಪ್ರಥಮ್' ಮೇಲೆ ಹಲ್ಲೆ ನಡೆಸಿದ ಮೇಲೆ ಮರುದಿನ ಸುದೀಪ್ ವೆಂಕಟ್‌ಗೆ ಹಿಗ್ಗಾ ಮುಗ್ಗ ಬೈದದ್ದು. ಕಳೆದ ಸೀಸನ್‌ನಲ್ಲಿ ವೆಂಕಟ್ ವರ್ತನೆ ಬಗ್ಗೆ ಸುದೀಪ್‌ರವರಿಗೆ ಸಂಪೂರ್ಣ ಅರಿವಿದ್ದೂ ಮತ್ತೆ ಏಕೆ ಒಳಗೆ ಕಳಿಸಿದರು?

2. ಎಲ್ಲದಕ್ಕೂ ಅತಿರೇಕದ ವರ್ತನೆ, ಎಲ್ಲರೊಂದಿಗೂ ಜಗಳವಾಡುವ ಸ್ವಭಾವದ ಪ್ರಥಮ್ ಬಹುತೇಕ ವೀಕ್ಷಕರಿಗೆ ಇಷ್ಟವಾಗಿಲ್ಲ ಎಂಬುದಂತೂ ನಿಜ. ಆದರೂ ಅವರನ್ನು ಹೊರಗೆ ಕಳಿಸದಿರಲು ಕಾರಣವೇನು?

3. ಸಂಜನಾ–ಭುವನ್ ಇಬ್ಬರೂ ಪರಸ್ಪರ ಮೆಚ್ಚಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಸುದೀಪ್ ಹಾಗೂ ಇತರ ಸ್ಪರ್ಧಿಗಳು ಅವರನ್ನು ಕುರಿತು ಅಗತ್ಯಕ್ಕಿಂತ ಹೆಚ್ಚಾಗಿ ಛೇಡಿಸುವುದು, ಚರ್ಚಿಸುವುದು ಇತ್ಯಾದಿ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

ವಾರದ ಪತ್ರ

## ಇಂತಹ ಪ್ರಶ್ನೆ ಬೇಕಾ?

ಮೂಢನಂಬಿಕೆ, ದೆವ್ವ ಭೂತ ಇವುಗಳ ವಿರುದ್ಧವಾಗಿ ಇದ್ದು ಸಾಮಾನ್ಯ ಜನರಿಗೆ ಜ್ಞಾನ– ವಿಜ್ಞಾನ ಪ್ರಶ್ನೆಗಳನ್ನು ಕೇಳುತ್ತಿದ್ದ ಡಾ. ನಾ. ಸೋಮೇಶ್ವರರವರು ದಿನಾಂಕ 21–11–2016ರ 'ಥಟ್ ಅಂತ ಹೇಳಿ' (ಚಂದನ ಚಾನೆಲ್) ಕಾರ್ಯಕ್ರಮದಲ್ಲಿ ಮೂರು ಸುಳಿವಿನ ಕೊನೆಯ ಪ್ರಶ್ನೆಯಲ್ಲಿ ಭೂತದ ಸುಳಿವುಗಳನ್ನು ಹೇಳಿದರು. ಈ ಮೂರು ಸುಳಿವಿನಲ್ಲಿ ಭೂತದ ಪೂರ್ಣ ಸ್ವರೂಪಗಳ ಬಗ್ಗೆ ವಿವರಣೆ ಇದ್ದು ಎಂತಹವರ ಮನಸ್ಸಿಗೂ ಹೆದರಿಕೆ ಬರುವಂತಿತ್ತು. ಬೇತಾಳ ಎಂದು ಇನ್ನೊಬ್ಬರು ಉತ್ತರ ಹೇಳಿದಾಗ ಬೇತಾಳದ ರೂಪವೇ ಬೇರೆ ಎಂದು ಅದನ್ನು ನೋಡಿದವರಂತೆ ಹೇಳಿದರು. ವೀಕ್ಷಕರಿಗೆ ಒಳ್ಳೆಯ ತಿಳಿವಳಿಕೆ ಕೊಡುವ ಕಾರ್ಯಕ್ರಮದಲ್ಲಿ ದೆವ್ವ ಭೂತ ಇಲ್ಲ ಎಂದು ಹೇಳುವ ಬದಲು ವಿವಿಧ ರೂಪಗಳ ಬಗ್ಗೆ ವರ್ಣಿಸಿದ ಇವರ ಪ್ರಶ್ನೆಗಳು ವೀಕ್ಷಕರಿಗೆ ದೊಡ್ಡ ಪ್ರಶ್ನೆಯಾಗಿ ಮನಸ್ಸು ಕೆಡಿಸುವಂತಿತ್ತು.

—ವೀಣಾ ಶಂಕರ್, ಬೆಂಗಳೂರು

## ಇದ್ದರೆ ಇರಬೇಕು 'ಸಾಕ್ಷಿ'

ಉದಯ ವಾಹಿನಿಯಲ್ಲಿ ರಾತ್ರಿ ಒಂಬತ್ತೂವರೆಗೆ ಪಿ. ಶೇಷಾದ್ರಿಯವರ ನಿರ್ದೇಶನದ 'ಸಾಕ್ಷಿ' ಧಾರಾವಾಹಿ ತುಂಬ ಉತ್ತಮವಾಗಿ ಮೂಡಿ ಬಂದಿತ್ತು. ಚುರುಕಾದ ಸಂಭಾಷಣೆಗಳು, ಜೀವನದ ಆಗುಹೋಗುಗಳಿಗೆ ಹತ್ತಿರವಾಗುವ ಘಟನೆಗಳು, ಅತಿರೇಕವಲ್ಲದ ಆದರ್ಶ, ಅನಾವಶ್ಯಕವಾಗಿ ಹಿಂಜಿ ಹಿಗ್ಗಿಸದೆ ಸಹಜವೆಂಬಂತೆ ತಮ್ಮ ನಡೆ ರೂಪಿಸಿಕೊಳ್ಳುವ ಸನ್ನಿವೇಷಗಳು, ಸಾಹಿತ್ಯ ಪ್ರೀತಿಯ ಪಾತ್ರ.. ಹೀಗೆ 'ಸಾಕ್ಷಿ' ವೀಕ್ಷಕರನ್ನು ಸೆರೆ ಹಿಡಿದಿಟ್ಟಿತ್ತು. ಚಿನ್ನು ಪಾತ್ರದ ಬಾಲ ನಟಿಗೆ ಅವಳಿಗೆ ಹೊರೆಯಾಗದಂತೆ ಅಭಿನಯವನ್ನು ಹಿತಮಿತವಾಗಿ ಬಳಸಿಕೊಳ್ಳಲಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಸರಿಯಾಗಿ ಒಂದು ವರ್ಷದಲ್ಲಿ ಕೊನೆಗೊಳಿಸಿದ ಒಂದು ಮಾದರಿ ಧಾರಾವಾಹಿಯಾಗಿತ್ತು.

—ಕೆ.ಆರ್. ಉಮಾದೇವಿ ಉರಾಳ್, ತೀರ್ಥಹಳ್ಳಿ

## ದಬ್ಬಾಳಿಕೆಯೇ ಧಾರಾವಾಹಿ

ಎಲ್ಲಾ ಧಾರಾವಾಹಿಗಳಲ್ಲಿ ಗಂಡಸು ಎಂಬುವವನಿಗೆ ಒಂದು ಕೆಲಸ ಎಂದು ಇರುತ್ತದೆ. ಅಥವಾ ಒಂದು ತನ್ನದೆ ಆದ ವ್ಯವಹಾರ ಎಂಬುದು ಇರುತ್ತದೆ. ಆದರೆ 'ಮನೆದೇವ್ರು' ಧಾರಾವಾಹಿಯಲ್ಲಿ ಮನೆಯ ಯಜಮಾನ ಎನಿಸಿಕೊಂಡವರಿಗೆ ಇದ್ಯಾವುದೂ ಇಲ್ಲ. ಕೇವಲ ಹೆಂಗಸರ ಮೇಲೆ ದಬ್ಬಾಳಿಕೆ ಮಾಡುವುದೇ ಇಡಿ ಧಾರಾವಾಹಿಯ ಕಥೆ. ನಿಜಕ್ಕೂ ಇದು ಆ ಇಬ್ಬರ ಮೇಲೆ ಅಸಹ್ಯ ಮೂಡುತ್ತದೆ. ಇನ್ನೊಬ್ಬ ಗಂಡಸು ಎಂಬಾತ (ಕಿರಣ್) ಮೂರು ಹೊತ್ತು ಕುಡಿದುಕೊಂಡು ಅನ್ಯ ಹೆಂಗಸಿನ ಜೊತೆ ಸಂಬಂಧ ಇರಿಸಿಕೊಂಡವ. ಇದು ಇವರಿಗೆ ಹೆಮ್ಮೆ ಬೇರೆ.

ಅದರಲ್ಲೂ ಯಜಮಾನನ ಪಾತ್ರಾಧಾರಿಯ ನಟನೆ ನಿಜಕ್ಕೂ ಮನಸ್ಸು ರೊಚ್ಚಿಗೇಳುವಂತೆ ಮಾಡುತ್ತದೆ. ಸಹಿಸಿಕೊಳ್ಳುವುದು ತುಂಬ ಕಷ್ಟದ ಕೆಲಸ. ಇನ್ನು ನಾಯಕ– ನಾಯಕಿಯ ತೊಳಲಾಟ ಸಹಿಸಿಕೊಳ್ಳಲು ಅಸಾಧ್ಯ. ಪೀಪಿ ಊದುವವನು ಎಂದು ಅವನು ಹೇಳುವುದಿಲ್ಲ. ಇವಳು ತಾನು ಪೀಪಿ ಊದುವವನನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳುವುದಿಲ್ಲ. ಇದನ್ನು ಹೇಳುವುದಕ್ಕೆ ಎರಡು ವರ್ಷ ಕಾಯಬೇಕು. ನಿಜಕ್ಕೂ ಈ ಧಾರಾವಾಹಿ ರಾಜ್‌ಕುಮಾರ್ ಬ್ಯಾನರ್ ಅಡಿಯಲ್ಲಿ ಬರಬಾರದಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ನಾಗರಹಾವೂ ಧಾರಾವಾಹಿಯೂ

ನಾಗರಹಾವಿಗೂ ಕನ್ನಡ ಟಿವಿ ಧಾರಾವಾಹಿಗಳಿಗೂ ಒಂದು ರೀತಿಯ ಅವಿನಾಭಾವ ಸಂಬಂಧ. ದಿನಾ ಪ್ರಸಾರವಾಗುವ ಧಾರಾವಾಹಿಗಳಲ್ಲಿ ಒಂದಾದರೂ ನಾಗರಹಾವಿನ ಸುತ್ತ ಇರುತ್ತದೆ. ಈ ಉದ್ದದ ಪಟ್ಟಿಗೆ ಇತ್ತೀಚೆಗೆ 'ನಾಗಿಣಿ' ಮತ್ತು 'ಸಪ್ತ ಮಾತೃಕಾ' ಧಾರಾವಾಹಿಗಳು ಸೇರಿವೆ. ನಾಗರಹಾವಿನ ಸುತ್ತ ಹೆಣೆದ ಧಾರಾವಾಹಿಗಳ ಕಥೆಗಳು ಎಷ್ಟು ವಾಸ್ತವಿಕ, ಸಮಕಾಲೀನ ಮತ್ತು ನೈಜ ಎನ್ನುವುದು ಬೇರೆ ಮಾತು. ಆದರೆ, ಈ ಧಾರಾವಾಹಿಗಳನ್ನು ರಾತ್ರಿ ನೋಡಿ ಮಲಗಿದ ಪುಟ್ಟ ಮಕ್ಕಳು ನಿದ್ರೆಯಲ್ಲಿ ಬೆಚ್ಚುವುದು ಮತ್ತು ಹೆದರುವುದರ ಬಗ್ಗೆ ಬಹುತೇಕ ತಾಯಂದಿರು ಹೇಳುತ್ತಾರೆ. ಇಂತಹ ಧಾರಾವಾಹಿಗಳಿಗೂ ಟಿಆರ್‌ಪಿ ಇರುವಾಗ, ಇವುಗಳನ್ನು ವಿರೋಧಿಸುವುದು ಅಸಾಧ್ಯ. ಭಯಾನಕವಾಗಿ ಭುಸುಗುಡುವ, ಹೆಡೆ ಎತ್ತಿ ಕಚ್ಚಲು ಮುನ್ನುಗ್ಗುವ ದೃಶ್ಯಗಳನ್ನು ನೋಡಿದ ಎಳೆ ಮಕ್ಕಳು ಹೆದರುವುದನ್ನು ತಪ್ಪಿಸಲು ಇಂತಹ ಧಾರಾವಾಹಿಗಳ ಪ್ರಸಾರದ ಸಮಯವನ್ನು ಬದಲಿಸಬಾರದೇಕೆ?

—ರಮಾನಂದ ಶರ್ಮಾ, ಬೆಂಗಳೂರು

## ಕೊನೆ ಎಂದು?

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕಿನ್ನರಿ, ಕುಲವಧು, ಪುಟ್ಟಗೌರಿ ಮದುವೆ, ಲಕ್ಷ್ಮೀ ಭಾರಮ್ಮ, ಅಗ್ನಿ ಸಾಕ್ಷಿ ಮುಂತಾದ ಧಾರಾವಾಹಿಗಳು ಹಾಗೂ ಅದನ್ನು ನಿರ್ದೇಶಿಸುತ್ತಿರುವವರು ಸಮಾಜಕ್ಕೆ ಏನನ್ನು ಹೇಳಲು ಹೊರಟಿದ್ದಾರೋ ಒಂದೂ ತಿಳಿಯುತ್ತಿಲ್ಲ. ಇವರು ಕಲಿಸಲು ಹೊರಟಿರುವುದು ವಂಚನೆ, ಕ್ರೌರ್ಯ, ಮೂಢನಂಬಿಕೆ ಇತ್ಯಾದಿ. ಇವುಗಳನ್ನು ವರ್ಷಾನುಗಟ್ಟಲೆ ಪ್ರಸಾರ ಮಾಡಿ ಜನರ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ. ಇದು ಆದಷ್ಟು ಬೇಗನೆ ಕೊನೆಗೊಂಡರೆ ಒಳ್ಳೆಯದು.

—ಜಿ. ರಾವ್, ಬೆಂಗಳೂರು